S.C. 48/2013.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ , ಇವರ ನ್ಯಾಯಾಲಯದಲ್ಲಿ.**

**<u>ಸತ್ರ ಮೊಕದ್ದಮೆ ಸಂಖ್ಯೆಃ 48/2013.</u>**

| | | | |
|---|---|---|---|
| ಹೆಸರು | : | ಜೈರಾಮ ಲಮಾಣಿ | ಪ್ರಾಸಾ-01 |
| ತಂದೆಯ ಹೆಸರು | : | ದೇಸು | |
| ವಯಸ್ಸು | : | 54 ವರ್ಷ | |
| ಉದ್ಯೋಗ | : | ಎ.ಎಸ್.ಐ | |
| ವಾಸಸ್ಥಳ | : | ಇಳಕಲ್ ಗ್ರಾಮೀಣ ಪೋಲಿಸಠಾಣೆ | |

ದಿನಾಂಕಃ 27-01-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಕಲಂ 299 ರ ಅಡಿಯಲ್ಲಿ ವಿಚಾರಣೆ.</u>**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ನ್ಯಾಯಾಲಯದ ಆದೇಶದ ಮೇರೆಗೆ ಆರೋಪಿ-1 ಮತ್ತು 2 ಇವರ ಮೇಲೆ ಅಟ್ಯಾಚಮೆಂಟ್ ವಾರೆಂಟ ಹಾಗೂ ಪ್ರೋಕ್ಲೇಮೇಷನನ್ನು ಜಾರಿ ಮಾಡಲು ಆದೇಶವಾಗಿದ್ದು ದಿನಾಂಕಃ 17-09-2023 ರಂದು 1 ಮತ್ತು 2 ನೇ ಆರೋಪಿತರು ಸಾಮಾನ್ಯವಾಗಿ ವಾಸಿಸುವ ಸ್ಥಳವಾದ ಭೂತನಾಳ ತಾಂಡಾಕ್ಕೆ ಬೆಳಗ್ಗೆ 10.00 ಗಂಟೆಗೆ ಭೇಟಿ ನೀಡಿ ತಾಂಡಾದಲ್ಲಿ ವಿಚಾರಿಸಲಾಗಿ ಅವರು ಸಿಗದೇ ಇರುವ ಕಾರಣ ಸಮುದಾಯ ಭವನ ಮತ್ತು ಪೋಸ್ಟ ಆಫೀಸಿನ ಗೋಡೆ ಮೇಲೆ ಕಿರಣ ರೂಪಸಿಂಗ್ ಚವ್ಹಾನ ಹಾಗೂ ನಾಗರಾಜ ಹುಲ್ಲೂರ ಇವರನ್ನು ಪಂಚರನ್ನಾಗಿ ನೇಮಿಸಿಕೊಂಡು ಅವರ ಸಮಕ್ಷಮ ಪ್ರೊಕ್ಲೇಮೇಷನ್ ಅಂಟಿಸಿದ್ದೇನೆ. ಆ ಬಗ್ಗೆ 2 ಪೋಟೋಗಳನ್ನು ತೆಗೆದಿರುತ್ತೇನೆ. ಪಂಚನಾಮೆಯನ್ನು ನಿಪಿ-1 ಎಂದು, ಅದರ ಮೇಲಿನ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೋಟೋಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

ದಿನಾಂಕಃ 18-09-2023 ರಂದು ಆಯುಕ್ತರು, ಮಹಾನಗರಪಾಲಿಕೆ ಹಾಗೂ ತಹಶೀಲ್ದಾರ, ವಿಜಯಪುರ ಇವರಿಗೆ ಆರೋಪಿತರಿಗೆ ಸೇರಿದ ಆಸ್ತಿ ವಿವರ ಪೂರೈಸಲು ಪತ್ರ ಬರೆದಿದ್ದೇನೆ. ನಂತರ ಆಯುಕ್ತರು, ಮಹಾನಗರಪಾಲಿಕೆ ಹಾಗೂ ತಹಶೀಲ್ದಾರ, ವಿಜಯಪುರ ಇವರು

ಆರೋಪಿತರಿಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ ಎಂದು ವಿವರ ನೀಡಿರುತ್ತಾರೆ. ಆಯುಕ್ತರು, ಮಹಾನಗರಪಾಲಿಕೆ, ವಿಜಯಪುರ ಇವರು ದಿನಾಂಕಃ 30-09-2023 ರಂದು ನೀಡಿರುವ ಹಿಂಬರಹವನ್ನು ನಿಪಿ-4 ಎಂದು ಗುರುತಿಸಲಾಯಿತು ಹಾಗೂ ತಹಶೀಲ್ದಾರ, ವಿಜಯಪುರ ಇವರು ದಿನಾಂಕಃ 17-11-2023 ರಂದು ನೀಡಿರುವ ಹಿಂಬರಹವನ್ನು ನಿಪಿ-5 ಎಂದು ಗುರುತಿಸಲಾಯಿತು. ಪ್ರೊಕ್ಲೇಮೇಷನ ಜಾರಿ ಮಾಡಿದ ಬಗ್ಗೆ ವರದಿ ನೀಡಿದ್ದು ಅದನ್ನು 6 ಎಂದು, ಅದರ ಮೇಲಿನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**<u>ಪಾಟಿಸವಾಲುಃ ಆರೋಪಿ ನಾಪತ್ತೆ.</u>**

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.